ಅ) ಚಿಕ್ಕಬಳ್ಳಾಪುರ ತಾಲ್ಲೂಕಿಗೆ ಅವಶ್ಯಕತೆ ಇರುವ 55 ಹೆಚ್ಚುವರಿ ಅಂಗನವಾಡಿ ಕೇಂದ್ರಗಳ ಪ್ರಸ್ತಾವನೆಯನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆತ ನಂತರ ಪ್ರಾರಂಭಿಸಲಾಗುವುದು.

ಚಿಕ್ಕಬಳ್ಳಾಪುರ ತಾಲ್ಲೂಕಿನ ರಂಗಧಾಮ ಕಾಲುವೆಯನ್ನು ಪೂರ್ಣಗೊಳಿಸುವುದು

663(840) ಶ್ರೀಮತಿ ಅನಸೂಯಮ್ಮ ನಟರಾಜನ್. ಕೆ.ವಿ. (ಚಿಕ್ಕಬಳ್ಳಾಪುರ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಬಳ್ಳಾಪುರ ತಾಲ್ಲೂಕಿನ ಅವಶ್ಯಕತೆಯಿರುವ ರಂಗಧಾಮ ಕಾಲುವೆ ನಿರ್ಮಾಣ ಹಂತದಲ್ಲಿಯೇ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಕಾಲುವೆ ಪೂರ್ಣ ಪ್ರಮಾಣದಲ್ಲಿ ನಿರ್ಮಾಣ ಗೊಂಡರೆ, ಈ ತಾಲ್ಲೂಕಿನ ಸುಮಾರು 10 ಕೆರೆಗಳಿಗೆ ಹಾಗೂ ಇದರ ಪೂರ್ವಕ್ಕಿರುವ ಅನೇಕ ಕೆರೆಗಳಿಗೆ ನೀರು ತುಂಬಿ ರೈತರಿಗೆ ಮಳೆಗಾಲ ಹಾಗೂ ಬೇಸಿಗೆ ಕಾಲದ ಬೆಳೆಗಳಿಗೆ ಅನುಕೂಲವಾಗುವುದರಿಂದ ಇದಕ್ಕಾಗಿ ಕೂಡಲೆ ಹಣವನ್ನು ಮಂಜೂರು ಮಾಡಿ ಕಾಲುವೆಯ ಕಾಮಗಾರಿಯನ್ನು ಪೂರ್ಣಗೊಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಬಂದಿದೆ.

ಆ) ಈ ಕಾಮಗಾರಿಯು ರೂ. 160.00 ಲಕ್ಷಕ್ಕೆ ಮಂಜೂರಾಗಿದ್ದು ಕಾಮಗಾರಿಯು ಈಗಾಗಲೇ ಪೂರ್ಣಗೊಂಡಿರುತ್ತದೆ. ಆದರೆ 2001-02ನೇ ಸಾಲಿನ ಮಳೆಗಾಲದಲ್ಲಿ ಸರಪಳಿ. 800 ಮೀ.ನಲ್ಲಿ ಬಲದಂಡೆಯು ಮಳೆಹಾನಿಗೀಡಾಗಿ ಒಡೆದು ಹೋಗಿದ್ದು, ದುರಸ್ತಿ ಕಾಮಗಾರಿಯು ಈಗ ಹಾಲಿ ಪ್ರಗತಿಯಲ್ಲಿರುತ್ತದೆ.

ಭದ್ರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡಬಾತಿ ಈ ಕಾರ್ಖಾನೆ ಕಾರ್ಮಿಕರಿಗೆ ಮುಂಬಡ್ತಿ ನೀಡಿಕೆಯಲ್ಲಿ ಅನ್ಯಾಯ

664(832) ಶ್ರೀ ಎಸ್. ಅಂಗಾರ್ (ಸೂಳ್ಯ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡ ಬಾತಿ ಈ ಕಾರ್ಖಾನೆ ಪ್ರಾರಂಭವಾದಾಗಿನಿಂದ ಇದುವರೆಗೂ ಇಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಪೈಕಿ ಮುಂಬಡ್ತಿ ನೀಡಲಾದ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಈ ರೀತಿ ಮುಂಬಡ್ತಿ ಕೊಡುವಂತಹ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಾರ್ಮಿಕರ ಹಿತ ಕಾಪಾಡಲಾಗಿದೆಯೇ?

ಇ) ಇಲ್ಲವಾದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಹಾಗೂ ಇದುವರೆಗೂ ಮುಂಬಡ್ತಿ ಪಡೆದಿರುವ ಕಾರ್ಮಿಕರ ಸಂಖ್ಯೆ ಎಷ್ಟು (ಇವರ ಹೆಸರುಗಳು, ಕೆಲಸಕ್ಕೆ ಸೇರಿದ ದಿನಾಂಕ, ಖಾಯಂ ಆದ ದಿನಾಂಕ ಮುಂಬಡ್ತಿ ಪಡೆದ ದಿನಾಂಕ, ಹುದ್ದೆಗಳು ಇತ್ಯಾದಿ) ವಿವರಗಳನ್ನೊದಗಿಸುವುದು;

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) :

ಅ) 201

ಆ) ಹೌದು

ಇ) ಉದ್ಭವಿಸುವುದಿಲ್ಲ

ಈ) ಕಾರ್ಖಾನೆ ಪ್ರಾರಂಭವಾದಾಗಿನಿಂದ ಈವರೆಗೆ ಒಟ್ಟು 201 ಕಾರ್ಮಿಕರಿಗೆ ಮುಂಬಡ್ತಿ ನೀಡಲಾಗಿದೆ. ಮುಂಬಡ್ತಿ ಪಡೆದ ಕಾರ್ಮಿಕರ ಪೂರ್ಣ ವಿವರಗಳು ಕಾರ್ಖಾನೆಯಲ್ಲಿ ಲಭ್ಯವಿರುತ್ತದೆ.

ರಾಜ್ಯದಲ್ಲಿ ಸಹಕಾರ ಸಂಘಗಳಿಗೆ ವಿತರಿಸುವ ಸಕ್ಕರೆ ಪ್ರಮಾಣ ಹೆಚ್ಚಿಸುವುದು

666(947) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಎಲ್ಲಾ ಸಹಕಾರ ಸಂಘಗಳಿಗೆ ವಿತರಿಸುವ ಸಕ್ಕರೆ ಪ್ರಮಾಣವನ್ನು ಹೆಚ್ಚಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಆ) ರಾಜ್ಯದ ಎಲ್ಲಾ ಸಹಕಾರ ಸಂಘಗಳಿಗೆ ವಿತರಿಸುವ ಸಕ್ಕರೆ ಪ್ರಮಾಣವನ್ನು ಹೆಚ್ಚಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಇ) ಹಾಲಿ ವಿತರಿಸುತ್ತಿರುವ ಪ್ರಮಾಣ ಎಷ್ಟು? ಹೆಚ್ಚಿಗೆ ಎಷ್ಟು ಪ್ರಮಾಣದಲ್ಲಿ ವಿತರಿಸಲು ಸರ್ಕಾರ ಉದ್ದೇಶಿಸಿದೆ?

ಈ) ರಾಜ್ಯದಲ್ಲಿ ಸಕ್ಕರೆ ಉತ್ಪಾದನೆಯ ಪ್ರಮಾಣ ಎಷ್ಟಿದೆ; ರಾಜ್ಯಕ್ಕೆ ಅಗತ್ಯವಾಗಿ ಬೇಕಾಗುವ ಸಕ್ಕರೆ ಪ್ರಮಾಣ ಎಷ್ಟು?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) ಕೇಂದ್ರ ಸರ್ಕಾರದ ಪಾಲಿಸಿಯಂತೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಮಾತ್ರ ಸಾ.ವಿ.ಪ. ಅಡಿಯಲ್ಲಿ ಲೆವಿ ಸಕ್ಕರೆಯನ್ನು ವಿತರಿಸಲಾಗುತ್ತಿದೆ.

ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಬಿ.ಪಿ.ಎಲ್ ಪಡಿತರ ಚೀಟಿಗಳಿಗೆ ಪ್ರತಿ ಕಾರ್ಡಿಗೆ 1 1/2 ಯಿಂದ 2 ಕೆ.ಜಿ. ಮತ್ತು ನಗರ: ಪಟ್ಟಣ ಹಾಗೂ ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿ ಪ್ರತಿ ಬಿಪಿಎಲ್ ಕಾರ್ಡಿಗೆ 3 ಕೆ.ಜಿ. ದರದಲ್ಲಿ ಸಕ್ಕರೆಯನ್ನು ವಿತರಿಸಲಾಗುತ್ತಿದೆ. ಹೆಚ್ಚಿನ ಪ್ರಮಾಣದ ಸಕ್ಕರೆಯನ್ನು ವಿತರಿಸುವ ಪ್ರಸ್ತಾಪನೆ ಇರುವುದಿಲ್ಲ.

ಈ) 2001-02ನೇ ಸಾಲಿನಲ್ಲಿ 14.51 ಲಕ್ಷ ಮೆ.ಟನ್ ಸಕ್ಕರೆಯು ರಾಜ್ಯದಲ್ಲಿ ಉತ್ಪಾದನೆ ಆಗಿರುತ್ತದೆ. ರಾಜ್ಯಕ್ಕೆ ಅಗತ್ಯವಾಗಿ ಬೇಕಾಗುವ ಬಿಪಿಎಲ್ ಪಡಿತರ ಚೀಟಿದಾರರಿಗೆ ಹಂಚಲು ಮಾಸಿಕ 13,380 ಮೆ.ಟನ್.ಗಳಷ್ಟು ಸಕ್ಕರೆಯ ಅಗತ್ಯವಿದೆ.